ದಿನಾಂಕ 22-02-2019 ರ ಶುಕ್ರವಾರ ಬೆಳಿಗ್ಗೆ 11-00 ಗಂಟೆಗೆ ಸೆಸ್ಕ್, ಪಾಂಡವಪುರ ಉಪವಿಭಾಗ ಕಛೇರಿಯ ಆವರಣದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

**ಹಾಜರಿದ್ದ ಅಧಿಕಾರಿಗಳು / ನೌಕರರು**
**ಶ್ರೀಮತಿ/ಶ್ರೀಯುತ :**

1. ಶ್ರೀನಿವಾಸ ಮೂರ್ತಿ : ಅಇಂ(ವಿ),ಮಂಡ್ಯ ವೃತ್ತ.
2. ಸೋಮರಾಜು : ಕಾನಿಇಂ(ವಿ), ಪಾಂಡವಪುರ ವಿಭಾಗ.
3. ಎಂ.ಪ್ರಕಾಶ್ : ಲೆಕ್ಕಾಧಿಕಾರಿ. ಪಾಂಡವಪುರ ವಿಭಾಗ.
4. ವಿ. ಪುಟ್ಟಸ್ವಾಮಿ : ಸಕಾನಿಇಂ(ವಿ), ಪಾಂಡವಪುರ ಉಪವಿಭಾಗ.
5. ರೂಪಿಣಿ.ಎಂ.ಎಸ್ : ಸಇಂ(ತಾಂ), ಪಾಂಡವಪುರ ಉಪವಿಭಾಗ.
6. ಹೆಚ್.ಇ. ಮಹದೇವ : ಸಇಂ(ವಿ), ಪಟ್ಟಣ ಶಾಖೆ, ಪಾಂಡವಪುರ ಉಪವಿಭಾಗ.
7. ಪಾಂಡುರಂಗ.ಹೆಚ್.ಸಿ : ಸಇಂ(ವಿ), ಟಿ.ಎಸ್. ಛತ್ರ ಶಾಖೆ.
8. ಸತೀಶ್ : ಸಇಂ(ವಿ), ಮೇಲುಕೋಟೆ ಶಾಖೆ.
9. ಸುಷ್ಮ : ಕಿಇಂ(ವಿ), ಚಿನಕುರಳಿ ಶಾಖೆ.
10. ಎ.ಬಿ ಕಿರಣ್ ಕುಮಾರ್ : ಪ್ರಭಾರ ಕಿಇಂ(ವಿ), ಕ್ಯಾತನಹಳ್ಳಿ ಶಾಖೆ.
11. ಬಿ. ನಂದೀಶ್ : ಕಿಇಂ(ವಿ), ಬನ್ನಂಗಾಡಿ ಶಾಖೆ.
12. ಎಂ.ಬಿ ಚೆಲುವರಾಜು : ಕಿಇಂ(ವಿ), ಮಾಣಿಕ್ಯನಹಳ್ಳಿ ಶಾಖೆ.
13. ಸೈಯದ್ ನಿಸಾರ್ ಅಹಮದ್ : ಪ್ರ.ಹಿ.ಸ, ಪಾಂಡವಪುರ ಉಪವಿಭಾಗ.

ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ, ಪಾಂಡವಪುರ ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ / ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ಸದರಿ ಸಭೆಯಲ್ಲಿ ಹಾಜರಿದ್ದ ವಿದ್ಯುತ್ ಗ್ರಾಹಕರು ಮೌಖಿಕವಾಗಿ ಮತ್ತು ಲಿಖಿತವಾಗಿ ತಿಳಿಸಿದ ವಿದ್ಯುತ್ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸಭೆಯಲ್ಲಿ ತೆಗೆದುಕೊಂಡ / ತೆಗೆದುಕೊಳ್ಳಬೇಕಾದ ತೀರ್ಮಾನಗಳು ಈ ಕೆಳಕಂಡಂತೆ ಇರುತ್ತವೆ.

**1. ಶ್ರೀಮತಿ ಮೀನಾಕ್ಷಮ್ಮ, ಲಕ್ಷ್ಮೀಸಾಗರಗ್ರಾಮ, ಮೊಬೈಲ್ ನಂ. 9741842859**

**ದೂರು:** ಮನೆಗೆ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿ, ಸುಮಾರು 1 ತಿಂಗಳಿನಿಂದ ಕಛೇರಿಗೆ ಬಂದು ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ), ರವರಲ್ಲಿ ಕೇಳಿದರೆ, ತಕರಾರೆಂದು ಕಾರಣ ನೀಡಿ, ಸರ್ವಿಸ್ ನೀಡುತ್ತಿಲ್ಲ, ಸರ್ವಿಸ್ ಕೊಡಿರೆಂದು ಅಧೀಕ್ಷಕ ಇಂಜನಿಯರ್(ವಿ) ರವರಲ್ಲಿ ಮನವಿ ಮಾಡಿದರು.

**ಕ್ರಮ:** ಸಭೆಯಲ್ಲಿದ್ದ ಅಧೀಕ್ಷಕ ಇಂಜನಿಯರ್(ವಿ)ರವರು ಕೂಡಲೇ ಸರ್ವಿಸ್ ನೀಡಿರೆಂದು ಹಾಜರಿದ್ದ ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ) ರವರಿಗೆ ಸೂಚಿಸಿದರು, ಆಗ ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ), ರವರು ತಕರಾರಿರುವ ವಿಷಯವನ್ನು ತಿಳಿಸಲು ಮುಂದಾದಾಗ ಈಗ ಸರ್ವಿಸ್ ನೀಡಿರಿ, ತಕರಾರುದಾರರು ನ್ಯಾಯಾಲಯದಿಂದ ಆದೇಶ ಮಾಡಿಸಿದಾಗ, ವಿದ್ಯುತ್ ನಿಲುಗಡೆಮಾಡುವ ಎಂದು ಆದೇಶಿಸಿದರು.

**2. ಶ್ರೀ ದೈತ್ಯೇಗೌಡ ಮಾಡ್ರಹಳ್ಳಿಗ್ರಾಮ, ಮೊಬೈಲ್ ನಂ.9663666251.**

**ದೂರು:** ನಮ್ಮ ಐ.ಪಿ ಸ್ಥಾವರದ ವ್ಯಾಪ್ತಿಯಲ್ಲಿ ಹೋಗಿರುವ ಕಂಬ ಬದಲಾಯಿಸಬೇಕು, ಮತ್ತು ಮಧ್ಯಂತರ ಹಾಕಬೇಕೆಂದು ಕೋರಿದರು.

**ಕ್ರಮ:** ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಸಂಬಂಧಪಟ್ಟ ಶಾಖಾಧಿಕಾರಿಯವರನ್ನು ವಿಚಾರಿಸಿದಾಗ ಒಂದು ಮುರಿದಿರುವ ಮತ್ತು ಎರಡು ಮಧ್ಯಂತರ ಕಂಬ ಹಾಕಲು ಅಂದಾಜುಪಟ್ಟಿಗೆ ಕಾರ್ಯಾದೇಶ ಪಡೆದುಕೊಂಡಿದ್ದು, ಗುತ್ತಿಗೆದಾರರಿಗೆ ಅವಾರ್ಡ್ ಸಹ ನೀಡಲಾಗಿದೆ, ಈ ವಾರದಲ್ಲಿ ಕೆಲಸ ಮುಗಿಸಿಕೊಡುವುದಾಗಿ ತಿಳಿಸಲಾಯಿತು.

3. **ಶ್ರೀ ಪರಮೇಶ್,ವಿದ್ಯುತ್ ಗುತ್ತಿಗೆದಾರರು, ಚಿನಕುರಳಿ ಗ್ರಾಮ ಮೊಬೈಲ್ ನಂ. 9916277407.**

**ದೂರು:** ಪಾಂಡವಪುರ ವಿಭಾಗದಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸರಿಯಾಗಿ ಕಾರ್ಯಾದೇಶಗಳನ್ನು ನೀಡುತ್ತಿಲ್ಲ, ಸೀನಿಯಾರಿಟಿ ಬಿಟ್ಟು, ಬೇರೊಬ್ಬರಿಗೆ ಕಾರ್ಯಾದೇಶ ಕೊಟ್ಟಿರುತ್ತಾರೆ, ನಾನು ಸಲ್ಲಿಸಿದ ಕೆ.ಮಲ್ಲೇನಹಳ್ಳಿ,ಹರವು,ತಾಳೆಕೆರೆ, ಮುಂತಾದ UNIP ಕೆಲಸಗಳಿಗೆ ಕಾರ್ಯಾದೇಶ ನೀಡಿರುವುದಿಲ್ಲವೆಂದು ದೂರಿತ್ತರು.

**ಕ್ರಮ:** ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ವಿಚಾರಿಸಲಾಗಿ, ಕಳೆದವಾರ ಇವರಿಗೆ 4 ಕಾಮಗಾರಿಗಳಿಗೆ ಕಾರ್ಯಾದೇಶ ನೀಡಿರುತ್ತೇನೆ ಕೆಲವೊಂದು ತುರ್ತು ಕೆಲಸಗಳನ್ನು, ಜನಸಂಪರ್ಕ ಸಭೆಯಲ್ಲಿ ವ್ಯಕ್ತವಾದವುಗಳಿಗೆ ಮೊದಲ ಆದ್ಯತೆಯನ್ನು ನೀಡಿ, ಕಾರ್ಯಾದೇಶ ನೀಡಲಾಗಿದೆಯಷ್ಟೆ ಎಂದು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ತಿಳಿಸಿದರು.

4. **ಶ್ರೀ ರಮೇಶ,ಕಾಂಗ್ರೆಸ್ ಮುಖಂಡರು,ತಾಲೂಕು ರೈತ ವಿಭಾಗದ ಅಧ್ಯಕ್ಷರು,ಚಿನಕುರ ಗ್ರಾಮ, ಮೊಬೈಲ್ ನಂ.**

**ದೂರು:** ನಾನು ಈ ಹಿಂದೆ ಜನಸಂಪರ್ಕ ಸಭೆಯಲ್ಲಿ ಕೋರಿದಂತೆ, ಚಿನಕುರಳಿಯಲ್ಲಿ ಹೋಬಳಿ ಮಟ್ಟದ ಜನಸಂಪರ್ಕ ಸಭೆಯನ್ನು ನಿಯೋಜಿಸಿದ್ದಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಮತ್ತು ಉಳಿದ ಹೋಬಳಿಗಳಲ್ಲಿಯೂ, ಹೀಗೆ ಮುಂದುವರೆಯಲಿ ಎಂದು ಕೋರಿದರು.

**ಕ್ರಮ:** ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಪ್ರತಿ ಹೋಬಳಿಯಲ್ಲೂ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರ ನೇತೃತ್ವದಲ್ಲಿ ಜನಸಂಪರ್ಕ ಸಭೆನಡೆಸಲು ಅಂದಾಜಿಸಿದ್ದು, ಖಂಡಿತವಾಗಿಯೂ ಮಾಡುತ್ತೇವೆಂದು ತಿಳಿಸಿದರು.

5. **ಶ್ರೀ ಮಹಾಲಿಂಗಸ್ವಾಮಿ,ಎಂ.ಬೆಟ್ಟಹಳ್ಳಿ ಗ್ರಾಮ ಮೊಬೈಲ್ ಇಲ್ಲ,**

**ದೂರು:** ನನ್ನ ಮನೆಗೆ ವಿದ್ಯುತ್ ಇರುವುದಿಲ್ಲ, ಯಾವುದಾದರೂ ಯೋಜನೆಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿರೆಂದು ಕೋರಿದರು.

**ಕ್ರಮ:** ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಚಾಲ್ತಿಯಲ್ಲಿರುವ RGGVY ಅಥವಾ DDUGJY ಯೋಜನೆಯಡಿಯಲ್ಲಿ ಇವರ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಿರೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಗೆ ಸೂಚಿಸಲಾಯಿತು.

6. **ಶ್ರೀ ರೇವಣ್ಣ, ಬಳೇತ್ತಿಗುಪ್ಪೆ ಗ್ರಾಮ, ಮೊಬೈಲ್ ನಂ. 632923962.**

**ದೂರು:** ನಮ್ಮ ಗಾಮದಲ್ಲಿ ವೋಲ್ಟೇಜ್ ಸಮಸ್ಯೆ ಇದೆ ಮತ್ತು ಒಂದೇ ಕಂಬದಲ್ಲಿ NJY ಹಾಗೂ ಐ.ಪಿ ಲೈನ್ ಇದೆ. ಒಂದಕ್ಕೊಂದು ತಾಕಿ, ಕಿಡಿಉಂಟಾಗುತ್ತದೆ, ಅಲ್ಲದೇ ಕೆಲವು ಮನೆಗಳಿಗೆ ವಿದ್ಯುತ್ ಸಂಪರ್ಕ ವಿರುವುದಿಲ್ಲವೆಂದು ದೂರಿದರು.

ಕ್ರಮ: ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಸಂಬಂಧಪಟ್ಟ ಶಾಖಾಧಿಕಾರಿಗೆ ಒಂದು ವಾರದೊಳಗೆ ಹೆಚ್ಚುವರಿಯಾಗಿ 63 KVA TC ಅಳವಡಿಸಲು ಅಂದಾಜುಪಟ್ಟಿ ಸಲ್ಲಿಸುವುದು ಮತ್ತು SDP ಯೋಜನೆಯಡಿ ರೀಕಂಡಕ್ಟರಿಂಗ್ ಗೆ ಅಂದಾಜುಪಟ್ಟಿ ಸಲ್ಲಿಸಿ NJY ಹಾಗೂ ಐ.ಪಿ ಲೈನ್ ಗಳನ್ನು ಬೇರ್ಪಡಿಸುವುದು ಸೇರಿದಂತೆ, ವಿದ್ಯುತ್ ಸಂಪರ್ಕವಿಲ್ಲದ ಮನೆಗಳಿಗೆ RGGVY ಅಥವಾ DDUGJY ಯೋಜನೆಯಡಿಯಲ್ಲಿ ಇವರ ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ವಹಿಸಿರೆಂದುಸೂಚಿಸಿದರು.

7. ಶ್ರೀ ವಿರೂಪಾಕ್ಷಾರಾಧ್ಯ, ಬಳೇತ್ತಿಗುಪ್ಪೆ ಗ್ರಾಮ, ಮೊಬೈಲ್ ನಂ. 9448528555.

ದೂರು: ನನ್ನ ಗದ್ದೆಯಲ್ಲಿ 63 KVA TC ಯಿದೆ, ಆಗಾಗ್ಗೆ ಕಿಡಿ ಉದುರುತ್ತದೆ, ನಮಗೆ ವ್ಯವಸಾಯ ಮಾಡಲು ತೊಂದರೆಯಿರುವದರಿಂದ ಬೇರೆಕಡೆ ಸ್ಥಳಾಂತರಿಸಿರೆಂದು ಕೋರಿದರು.

ಕ್ರಮ: ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ನೀವು ಇಲಾಖೆಗೆ 10% ಮೇಲ್ವಿಚಾರಣಾ ಶುಲ್ಕ ಪಾವತಿಸಿ, ಸ್ವಂತ ಕಾಮಗಾರಿ ಯೋಜನೆಯಡಿಯಲ್ಲಿ ಟಿ.ಸಿ ಸ್ಥಳಾಂತರಿಸಿಕೊಳ್ಳಬಹುದೆಂದು ತಿಳಿಸಿದರು.

8. ಶ್ರೀ ಕುಮಾರ್, ಹರಳಹಳ್ಳಿ ಗ್ರಾಮ, ಮೊಬೈಲ್ ನಂ.9741739456.

ದೂರು: ನನ್ನ ಐ.ಪಿ ಸ್ಥಾಪರಕ್ಕೆ TC ಅಳವಡಿಸಲು WORK ORDAR ಆಗಿದೆ, ಇನ್ನೂ WORK AWARD ನೀಡಿಲ್ಲವೆಂದು ದೂರಿದರು.

ಕ್ರಮ: ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು WORK AWARD ನೀಡಿ ತಕ್ಷಣವೇ ಕಾಮಗಾರಿ ಪೂರ್ಯೆಸಿರೆಂದು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ತಿಳಿಸಿದರು.

9. ಶ್ರೀ ಜವರೇಗೌಡ, ಮಾಡ್ರಳ್ಳಿಗ್ರಾಮ. ಮೊಬೈಲ್ ನಂ. 9972185800.

ದೂರು: ನಮ್ಮ ಗ್ರಾಮದಲ್ಲಿ ಬೀದಿದೀಪದ ಕಂಬಗಳು ಶಿಥಿಲವಾಗಿವೆ, ಬದಲಾಯಿಸಿರೆಂದು ಕೋರಿದರು.

ಕ್ರಮ: ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಹಣ ಪಾವತಿಸಿರುವ ಗ್ರಾಮಪಂಚಾಯಿತಿಗಳ ಅಭಿವೃದ್ಧಿ ಕೆಲಸಗಳನ್ನು ಕೂಡಲೇ ಮಾಡಿಕೊಡಿ, ಈ ವಿಷಯವಾಗಿ ಜಿಲ್ಲಾಪಂಚಾಯಿತಿಯಲ್ಲಿ ಚರ್ಚಿತವಾಗಿದೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೇ ಸೂಚಿಸಿರುತ್ತಾರೆಂದು ಸಭೆಗೆ ತಿಳಿಸಿದರು.

10. ಶ್ರೀ ತಿಮ್ಮೇಗೌಡ, ಶಂಕನಹಳ್ಳಿಗ್ರಾಮ. ಮೊಬೈಲ್ ನಂ.ಇಲ್ಲ.

ದೂರು: ನಮ್ಮ ಜಮೀನು ಮತ್ತು ಕೋಳಿಫಾರಂ ಹತ್ತಿರ NJY ಲೈನ್ ಗೆ ತಾಕುತ್ತಿದ್ದು, ವಿದ್ಯುತ್ ಅಪಘಾತವಾಗಿ ಎಲ್ಲಾ ಸುಟ್ಟು ಹೋಗುವ ಅಪಾಯವಿದೆ, ತಂತಿ ಬದಲು ಕೇಬಲ್ ಹಾಕಿಸಿಕೊಡಿರೆಂದು ದೂರಿದರು.

ಕ್ರಮ: ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಸಂಬಂಧಿಸಿದ ಶಾಖಾಧಿಕಾರಿಗೆ ಸ್ಥಳ ಪರಿಶೀಲಿಸಿ, ಮಾರ್ಗದಾಳುಗಳನ್ನು ಕಳುಹಿಸಿ, ಜಂಗಲ್ ಕಟಿಂಗ್ ಮಾಡಿಸಿ, ಅಪಾಯವನ್ನು ತಪ್ಪಿಸುವುದರ ಜೊತೆಗೆ, ತಂತಿ ಬದಲಿಸಬೇಕಾದಲ್ಲಿ ಸೂಕ್ತಕ್ರಮವಹಿಸುವುದೆಂದು ಸೂಚಿಸಿದರು.

**11. ಶ್ರೀ ರಘುವೀರ್,ಪಾಂಡವಪುರ. ಮೊಬೈಲ್ ನಂ.9845796603.**

**ದೂರು:** ರಂಗನಕೊಪ್ಪಲು ಬಳಿಯ ನಮ್ಮ ಜಮೀನಿನಲ್ಲಿ ಕಬ್ಬು ವಿದ್ಯುತ್ ಶಾರ್ಟ್‌ಸರ್ಕ್ಯೂಟ್‌ನಿಂದ ಸುಟ್ಟುಹೋಗಿ, 3 ತಿಂಗಳಾದರೂ ಇನ್ನೂ ಪರಿಹಾರ ಸಿಕ್ಕಿಲ್ಲ ಮತ್ತು ಸರಿಯಾಗಿ ಅಧಿಕಾರಿಗಳು ಸ್ಪಂದಿಸುತ್ತಿಲ್ಲವೆಂದು ದೂರಿದರು.

**ಕ್ರಮ:** ಸಭೆಯಲ್ಲಿದ್ದ ಅಧೀಕ್ಷಕ ಇಂಜಿನಿಯರ್(ವಿ)ರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಹಾಗೂ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ರವರನ್ನು ವಿಚಾರಿಸಿ, ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುವುದನ್ನು ಖಚಿತ ಪಡಿಸಿಕೊಂಡು ವಿದ್ಯುತ್ ಪರಿವೀಕ್ಷಕರಿಂದ ಮಾತ್ರ ವರದಿ ಬರಬೇಕಿದ್ದು, ಒಂದೆರಡು ದಿನದಲ್ಲಿ ವೃತ್ತ ಕಛೇರಿಗೆ ಸಲ್ಲಿಸಲಾಗುವುದೆಂದು ತಿಳಿಸಿ, ದೂರುದಾರರಿಗೆ ಆದಷ್ಟು ಬೇಗ ಪರಿಹಾರದ ಹಣ ನೀಡಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.

**:: ಸಭೆಯನ್ನು ಮಧ್ಯಾಹ್ನ 01-30 ಗಂಟೆಗೆ ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು ::**

ಮೆಮೊ ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾಂ)/ಪಾ.ಪುರ/ 3352-65 ದಿನಾಂಕ: 27-02-19

**ಪ್ರತಿಯನ್ನು ಇವರ ಅವಗಾಹನೆಗೆ ಸಲ್ಲಿಸಲಾಗಿದೆ:**

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ, ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ, ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ.
4. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಿಭಾಗ, ಪಾಂಡವಪುರ.

**ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ:**

1. ಲೆಕ್ಕಾಧಿಕಾರಿ, ಸೆಸ್ಕ್, ಪಾಂಡವಪುರ.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ವಿಭಾಗೀಯ ಕಛೇರಿ, ಪಾಂಡವಪುರ.
3. ಲೆಕ್ಕಾಧಿಕಾರಿ, ಆಂ.ಪ., ಸೆಸ್ಕ್, ಪಾಂಡವಪುರ.

**ಪ್ರತಿಯನ್ನು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ:**

1. ಶಾಖಾಧಿಕಾರಿ, ಸೆಸ್ಕ್, ಕಾರ್ಯ ಮತ್ತು ಪಾಲನಾ ಶಾಖೆ, ಪಟ್ಟಣ (ಪಾಂಡವಪುರ) / ಟಿ.ಎಸ್. ಛತ್ರ / ಚಿನಕುರಳಿ / ಕ್ಯಾತನಹಳ್ಳಿ / ಬನ್ನಂಗಾಡಿ / ಮೇಲುಕೋಟೆ / ಮಾಣಿಕ್ಯನಹಳ್ಳಿ.

ಸಇಂ(ತಾಂ) / ಮುಕ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಪಾಂಡವಪುರ ಉಪವಿಭಾಗ.